# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1141 |
| **ಸದಸ್ಯರ ಹೆಸರು** | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 07.03.2021 |
| **ಉತ್ತರಿಸುವ ಸಚಿವರು** | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಅನುದಾನಿತ ಪ್ರಾಥಮಿಕ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ ರಾಜೀನಾಮೆಯಿಂದ ಡಿಸೆಂಬರ್ 2015ರವರೆಗೆ ಖಾಲಿಯಾಗಿರುವ ಒಟ್ಟು ಹುದ್ದೆಗಳು ಎಷ್ಟು;(ವಿವರ ನೀಡುವುದು)</td><td>ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ದಿನಾಂಕ:31-12-2015 ರ ವರೆಗೆ ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ಹುದ್ದೆಗಳ ವಿವರ (ಅನುಬಂಧ-1)
<table>
<tr><th>ಕ್ರ.ಸಂ</th><th>ಪ್ರೌಢ ಶಾಲೆ</th><th>ಪದವಿ ಪೂರ್ವ</th></tr>
<tr><td>1.</td><td>3689</td><td>998</td></tr>
</table></td></tr>
<tr><td>ಆ</td><td>ಡಿಸೆಂಬರ್ 2015ರ ನಿವೃತ್ತಿ, ಮರಣ ರಾಜೀನಾಮೆಯಿಂದ ಖಾಲಿಯಾಗಿರುವ ಎಲ್ಲಾ ಹುದ್ದೆಗಳನ್ನು ತುಂಬಲು ಯಾವಾಗ ಅನುಮತಿ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)</td><td>ಡಿಸೆಂಬರ್ 2015ರ ಅಂತ್ಯದವರೆಗೆ ನಿವೃತ್ತಿ, ಮರಣ, ರಾಜೀನಾಮೆಯಿಂದ ಖಾಲಿಯಾಗಿರುವ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.</td></tr>
<tr><td>ಇ</td><td>ಜನವರಿ 2016ರಿಂದ 2020ರ ಡಿಸೆಂಬರ್ ನಿವೃತ್ತಿ ಮರಣ ರಾಜೀನಾಮೆಯಿಂದ ಖಾಲಿಯಾಗಿರುವ ಸಂಖ್ಯೆ ಎಷ್ಟು;(ವಿವರ ನೀಡುವುದು)</td><td>
<table>
<tr><th>ಪ್ರೌಢ ಶಾಲೆಗಳಲ್ಲಿನ ಹುದ್ದೆಗಳ ಸಂಖ್ಯೆ</th><th>ಪದವಿ ಪೂರ್ವ ಕಾಲೇಜುಗಳಲ್ಲಿನ ಹುದ್ದೆಗಳ ಸಂಖ್ಯೆ</th></tr>
<tr><td>4,810</td><td>2159</td></tr>
</table>
(ಅನುಬಂಧ-2)</td></tr>
<tr><td>ಈ</td><td>ಸದರಿ ಖಾಲಿ ಹುದ್ದೆಗಳನ್ನು ತುಂಬಲು ಯಾವ ಕಾಲಮಿತಿಯಲ್ಲಿ ಅನುಮತಿ ನೀಡಲಾಗುವುದು?(ವಿವರ ನೀಡುವುದು)</td><td>ಪ್ರಸ್ತುತ ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದು, ಡಿಸೆಂಬರ್ 2015ರ ಅಂತ್ಯದವರೆಗೆ ಮರಣ, ನಿವೃತ್ತಿ, ರಾಜಿನಾಮೆ ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br>ಆರ್ಥಿಕ ಮಿತವ್ಯಯ ಸಡಿಲಿಕೆಯ ನಂತರ ಕ್ರಮವಹಿಸಲಾಗುವುದು.</td></tr>
</table>

ಇಪಿ 85 ಎಸ್‌ಇಎಸ್ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1043 (1141) ಗೆ ಉತ್ತರ

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ) | ಅನುದಾನಿತ ಪ್ರಾಥಮಿಕ, ಪ್ರೌಢಶಾಲಾ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ ರಾಜೀನಾಮೆಯಿಂದ 2015 ರವರೆಗೆ ತೆರವಾಗಿರುವ ಒಟ್ಟು ಹುದ್ದೆಗಳೆಷ್ಟು (ವಿವರ ನೀಡುವುದು) | ಪ್ರಾಥಮಿಕ ಶಿಕ್ಷಣ: ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಅಗತ್ಯಕ್ಕಿಂತ ಹೆಚ್ಚುವರಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿ ಅನುದಾನಿತ ಹುದ್ದೆಗಳು ಖಾಲಿಯಾದಲ್ಲಿ ಅಥವಾ ಒಂದು ಖಾಸಗಿ ಪ್ರಾಥಮಿಕ ಶಾಲೆಯನ್ನು ಸಹಾಯಾನುದಾನಕ್ಕೆ ಒಳಪಡಿಸಿದ ಪ್ರಥಮ ಸಂದರ್ಭದಲ್ಲಿ ಕೆಲವು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸದೇ ಉಳಿದಿದ್ದಲ್ಲಿ ಅಂತಹ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರುಗಳಿಂದ ತುಂಬಿಕೊಳ್ಳಬೇಕೆ ಹೊರತು ನೇರ ನೇಮಕಾತಿ ಮಾಡಿಕೊಳ್ಳತಕ್ಕದ್ದಲ್ಲ ಎಂಬುದಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 267 ಪಿಎಂಸಿ 2007, ದಿನಾಂಕ:12-10-2007 ಆದೇಶಿಸಲಾಗಿದೆ.<br>ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆಗಳು: 3689 |
| ಆ) | ಡಿಸೆಂಬರ್ 2015 ರ ನಿವೃತ್ತಿ ರಾಜೀನಾಮೆಯಿಂದ ಖಾಲಿಯಾಗಿರುವ ಎಲ್ಲಾ ಹುದ್ದೆಗಳನ್ನು ತುಂಬಲು ಯಾವಾಗ ಅನುಮತಿ ನೀಡಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು) | ಡಿಸೆಂಬರ್ 2015 ರವರೆಗೆ ನಿವೃತ್ತಿ ರಾಜೀನಾಮೆಯಿಂದ ಖಾಲಿಯಾಗಿರುವ ಹುದ್ದೆಗಳನು ತುಂಬಲು ಆರ್ಥಿಕ ಇಲಾಖೆ ಸಹಮತಿ ನೀಡಿದ್ದು ದಿನಾಂಕ:10-06-2020 ರ ಆರ್ಥಿಕ ಮಿತವ್ಯಯ ಆದೇಶವನ್ನು ಸರ್ಕಾರದ ಹಂತದಲ್ಲಿ ಹಿಂಪಡೆಯಬೇಕಾಗಿರುತ್ತದೆ. |
| ಇ) | ಜನವರಿ 2016 ರಿಂದ 2020ರ ಡಿಸೆಂಬರ್ ರವರೆಗೆ ನಿವೃತ್ತಿ, ಮರಣ ರಾಜೀನಾಮೆಯಿಂದ ಖಾಲಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು) | ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಜನವರಿ 2016 ರಿಂದ 2020ರ ಡಿಸೆಂಬರ್ ರವರೆಗೆ ನಿವೃತ್ತಿ, ಮರಣ ರಾಜೀನಾಮೆಯಿಂದ ಖಾಲಿಯಾಗಿರುವ ಹುದ್ದೆಗಳ 4810 |
| ಈ) | ಸದರಿ ಖಾಲಿ ಹುದ್ದೆಗಳನ್ನು ತುಂಬಲು ಯಾವ ಕಾಲ ಮಿತಿಯಲ್ಲಿ ಅನುಮತಿ ನೀಡಲಾಗುವುದು? (ವಿವರ ನೀಡುವುದು) | ಸರ್ಕಾರದ ಹಂತದಲ್ಲಿ ನಿರ್ಣಯಿಸಬೇಕಾಗಿರುತ್ತದೆ |

ನಿರ್ದೇಶಕರು (ಪ್ರೌಢ ಶಿಕ್ಷಣ)

Scanned with CamScanner